ಅನುಬಂಧ

ಪ್ರಶ್ನೆ ವಿಭಾಗ (೧)ಗೆ ಉತ್ತರ

ಪದವಿ ಪೂರ್ವ ತರಗತಿಗಳನ್ನು ಪದವಿ ಕಾಲೇಜುಗಳಿಂದ ಬೇರ್ಪಡಿಸುವಲ್ಲಿ ಸ್ಥೂಲವಾಗಿ ಈ ಕೆಳಕಂಡ ಮಾರ್ಗಸೂಚಿಗಳನ್ನು ಅನುಸರಿಸಲಾಗುವುದು.

(1) ಈ ನಿಟ್ಟಿನಲ್ಲಿ ಮೊದಲ ಹಂತವಾಗಿ ಪದವಿ ಕಾಲೇಜುಗಳು ಇದ್ದ ಸ್ಥಳದಲ್ಲಿ ಸರ್ಕಾರಿ ಪದವಿ ಪೂರ್ವ ಕಾಲೇಜುಗಳು ಸಹ ಇರವುದಾದಲ್ಲಿ ಅಂತಹ ಪದವಿ ಕಾಲೇಜುಗಳಿಂದ ಮಾತ್ರ ಪದವಿ ಪೂರ್ವ ತರಗತಿಗಳನ್ನು ಬೇರ್ಪಡಿಸಲಾಗುವುದು.

(2) ಪ್ರಥಮ ದರ್ಜೆ ಕಾಲೇಜುಗಳಲ್ಲಿ ಪದವಿ ಪೂರ್ವ ತರಗತಿಗಳನ್ನು ಮುಚ್ಚುವುದರಿಂದ, ಆಯಾ ಸರ್ಕಾರಿ ಪದವಿ ಪೂರ್ವ ಕಾಲೇಜುಗಳ ಅಗತ್ಯ ಮೂಲ ಭೂತ ಸೌಕರ್ಯಗಳನ್ನು ಹೊಂದಿದ್ದು, ವಿದ್ಯಾರ್ಥಿಗಳ ಪ್ರವೇಶಾವಕಾಶಕ್ಕೆ ತೊಂದರೆ ಉಂಟಾಗದಿದ್ದಲ್ಲಿ ಮಾತ್ರ ಪದವಿ ಪೂರ್ವ ತರಗತಿಗಳನ್ನು ಬೇರ್ಪಡಿಸಲಾಗುವುದು.

(3) ಸರ್ಕಾರಿ ಪದವಿ ಪೂರ್ವ ಕಾಲೇಜುಗಳಲ್ಲಿ ಅಗತ್ಯ ಪಠ್ಯ ವಿಷಯಗಳು ಲಭ್ಯವಿರುತ್ತದೆ ಎಂಬುದನ್ನು ಖಾತರಿಪಡಿಸಿಕೊಳ್ಳಲಾಗುವುದು.

ರಾಜ್ಯದಲ್ಲಿ ಕೊಳವೆ ಬಾವಿಗಳ ದುರಸ್ಥಿ

2911- ಶ್ರೀ ಯು. ಆರ್. ಸಭಾಪತಿ (ಉಡುಪಿ) : ಮಾನ್ಯ ಗ್ರಾಮೀಣಾಭಿವೃದ್ಧಿ ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ 1995-96, 1996-97 ಹಾಗೂ 97 ಜುಲೈ ತಿಂಗಳವರಗೆ ಜಿಲ್ಲಾ ವ್ಯಾಪ್ತಿಯಲ್ಲಿ ಕೊರೆದಿರುವ ಕೊಳವೆಬಾವಿಗಳು ಎಷ್ಟು?

ಆ) ಇದರಲ್ಲಿ ನೀರು ಯಥೇಚ್ಚವಾಗಿ ದೊರೆಯುವ ಕೊಳವೆಬಾವಿಗಳ ಸಂಖ್ಯೆ ಎಷ್ಟು? ನೀರಿಲ್ಲದೆ ಮುಚ್ಚಿರುವ ಕೊಳವೆ ಬಾವಿಗಳು ಎಷ್ಟು?

ಇ) ಈಗ ಎಷ್ಟು ಆಡಿಗಳವರೆಗೆ ಕೊಳವೆಬಾವಿಗಳನ್ನು ಕೊರೆಯಲಾಗುವುದು?

ಈ) ಎಷ್ಟು ಕೊಳವೆಬಾವಿಗಳಲ್ಲಿ ಹ್ಯಾಂಡ್‌ಪಂಪ್ ಕೆಟ್ಟು ಹೋಗಿರುತ್ತದೆ? ಸರಿಪಡಿಸಲು ತೆಗೆದುಕೊಂಡಿರುವ ಕ್ರಮಗಳೇನು? (ವಿವರ ನೀಡುವುದು)

ಶ್ರೀ ಎಂ. ಪಿ. ಪ್ರಕಾಶ್(ಗ್ರಾಮೀಣಾಭಿವೃದ್ಧಿ ಮತ್ತು ಪಂ. ರಾಜ್ ಸಚಿವರು) :

ಅ) 1995-96ನೇ ಸಾಲಿನಿಂದ ಜುಲೈ-97ರ ಅಂತ್ಯದವರೆಗೆ ರಾಜ್ಯದಲ್ಲಿ ಒಟ್ಟು 22499 ಕೊಳವೆಬಾವಿಗಳನ್ನು ಕೊರೆಯಲಾಗಿದೆ.

ಆ) ಇವುಗಳಲ್ಲಿ ಹೆಚ್ಚು ಇಳುವರಿ ದೊರಕಿದ ಕೊಳವೆಬಾವಿಗಳ ಸಂಖ್ಯೆ : 8943, ನೀರಿಲ್ಲದೆ ಬಿಟ್ಟುಕೊಡಲಾದ ಕೊಳವೆ ಬಾವಿಗಳ ಸಂಖ್ಯೆ: 1694.

ಇ) ಈಗ, 75 ಮೀಟರ್‌ನಿಂದ 120 ಮೀಟರ್ ಅಂದಾಜಿನ ಆಳಕ್ಕೆ ಕೊಳವೆಬಾವಿಗಳನ್ನು ಕೊರೆಯಲಾಗುತ್ತಿದೆ.

ಈ) ರಾಜ್ಯದಲ್ಲಿ ಜುಲೈ 97ರ ಅಂತ್ಯಕ್ಕೆ 2530 ಕೈಪಂಪು ಕೆಟ್ಟಿರುತ್ತವೆ. ಕೈಪಂಪುಗಳ ಚಿಕ್ಕಪುಟ್ಟ ದುರಸ್ತಿಗಳನ್ನು ಆಯಾ ಗ್ರಾಮಪಂಚಾಯ್ತಿಗಳೇ ಮಾಡಿಕೊಳ್ಳುತ್ತವೆ. ದೊಡ್ಡ ಪ್ರಮಾಣದ ದುರಸ್ತಿ ಕುರಿತು ದೂರು ಬಂದ ಕೂಡಲೇ ಸಂಬಂಧಪಟ್ಟ ಜಿಲ್ಲಾ ಪಂಚಾಯತ್ ಇಂಜಿನಿಯರಿಂಗ್ ಉಪವಿಭಾಗದಲ್ಲಿ ದಾಖಲಿಸಿಕೊಂಡು ಪ್ರತಿ ಜಿಲ್ಲಾ ಪಂಚಾಯತ್ ಇಂಜಿನಿಯರಿಂಗ್ ಉಪವಿಭಾಗ ಹೊಂದಿರುವ ಸಂಚಾರಿ ಕೈಪಂಪು ದುರಸ್ತಿ ಘಟಕದ ಮುಖಾಂತರ ದುರಸ್ತಿ ಮಾಡಲು ಕ್ರಮ ಕೈಗೊಳ್ಳಲಾಗುತ್ತದೆ.

ಗುತ್ತಿಗೆ ಆಧಾರದಲ್ಲಿ ಕೆಲಸ ನಿರ್ವಹಿಸುತ್ತಿರುವ ವೈದ್ಯರ ಖಾಯಂ

2913 - ಶ್ರೀ ಯು. ಆರ್. ಸಭಾಪತಿ (ಉಡುಪಿ) : ಮಾನ್ಯ ಆರೋಗ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯ ಸರ್ಕಾರವು ಗುತ್ತಿಗೆ ಆಧಾರದಲ್ಲಿ ಕೆಲಸ ನಿರ್ವಹಿಸಿರುವ ವೈದ್ಯರ ಖಾಯಂ ಕುರಿತಂತೆ ಸೇವಾ ನಿಯಮಾವಳಿ ರೂಪಿಸುವುದು ನಿಜವಲ್ಲವೇ?

ಆ) ಸದರಿ ನಿಯಮಾವಳಿಯಲ್ಲಿರುವ ಎಲ್ಲಾ ವೈದ್ಯರ ಖಾಯಂ ನೇಮಕಾತಿ ಆದೇಶ ಹೊರಡಿಸದೆ ಇರಲು ಕಾರಣವೇನು? (ನಿಯಮಾವಳಿ ಮತ್ತು ನೇಮಕಾತಿಯ ಎಲ್ಲಾ ಆದೇಶಗಳ ವಿವರ ನೀಡುವುದು);

ಇ) ಇಂತಹ ವೈದ್ಯರ ಅದಾಯ ಪ್ರಮಾಣ ಪತ್ರ ಮತ್ತು ಅಥವಾ ಇನ್ನಿತರ ಪ್ರಮಾಣ ಪತ್ರವನ್ನು ಸಮರ್ಪಕವಾಗಿ ಪರಿಶೀಲಿಸದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? ಇಂತಹ ಅಭ್ಯರ್ಥಿಯ ವೈದ್ಯರಿಗೆ ತಮ್ಮ ಪ್ರಮಾಣ ಪತ್ರಗಳನ್ನು ಸಮರ್ಥಿಸಿಕೊಳ್ಳಲು ಸರ್ಕಾರ ಅವಕಾಶ ನೀಡಲಾಗುವುದೇ?

ಈ) ಪ್ರಮಾಣ ಪತ್ರಗಳ ಸಮರ್ಥನೆಯ ನಂತರವೂ ತಪ್ಪಿತಸ್ಥರೆಂದು ಕಂಡುಬಂದಲ್ಲಿ ಮಾತ್ರ ತಪ್ಪಿತಸ್ಥ ಅಭ್ಯರ್ಥಿಯ ವೈದ್ಯರನ್ನು ಸೇವೆಯಿಂದ ಬಿಡುಗಡೆಗೊಳಿಸುವ ನಿರ್ಧಾರ ಸರ್ಕಾರ ಕೈಗೊಳ್ಳಬಹುದೇ? (ವಿವರ ನೀಡುವುದು)

ಡಾ|| ಹೆಚ್. ಸಿ. ಮಹದೇವಪ್ಪ (ಆರೋಗ್ಯ ಮತ್ತ ಕುಟುಂಬ ಕಲ್ಯಾಣ ಸಚಿವರು) :

ಅ) 1992ನೇ ಸಾಲಿನಲ್ಲಿ ಗುತ್ತಿಗೆ ಆಧಾರದ ಮೇಲೆ ನೇಮಕಗೊಂಡ ವೈದ್ಯರನ್ನು ಮಾತ್ರ ವಿಲೀನಗೊಳಿಸಲು ಸೇವಾ ನಿಯಮಾವಳಿ ರೂಪಿಸಲಾಗಿದೆ.

ಆ) ಸರ್ಕಾರಿ ಅಧಿಸೂಚನೆ ಸಂಖ್ಯೆ: ಡಿಪಿಎಆರ್ 48 ಎಸ್‌ಆರ್‌ಡಿ 96, ದಿನಾಂಕ: 9-6-97 ರಲ್ಲಿ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ (ಸೇವೆಗಳು)ಯಲ್ಲಿ ಸರ್ಕಾರಿ ಆದೇಶ